ಇದೆ ಅಲ್ಲಿಗೆ ಕಾಂಟ್ರಾಕ್ಟ್ ಡಾಕ್ಟರ್ಸ್ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಕೂಡ ಜಾರಿಯಲ್ಲಿದೆ. ಆ ಹುದ್ದೆಗಳು ಭರ್ತಿಯಾದ ನಂತರ ಸಂಬಳಕ್ಕೋಸ್ಕರ ಇಟ್ಟಿರುವಂಥ ಹಣವು ಸ್ವಾಭಾವಿಕವಾಗಿಯೇ ಖರ್ಚಾಗುತ್ತದೆ.

ಶ್ರೀ ಎ. ರಾಮದಾಸ್ : ಮಿತವ್ಯಯದ ಕುರಿತು ಸರಕಾರದ ಆದೇಶ ಇದೆ ಎಂದು ಹೇಳಿದ್ದೀರಿ. ನಿಮ್ಮ ಡಿಪಾರ್ಟ್‌ಮೆಂಟ್‌ಗೆ ಹಣವನ್ನು ಖರ್ಚು ಮಾಡುವ ವಿಚಾರದಲ್ಲಿ ನಿರ್ಬಂಧಗಳು ಏನಾದರೂ ಇವೆಯೇ? ಉತ್ತರದಲ್ಲಿ ಯಾಕೆ ಹಾಗೆ ಕೊಟ್ಟಿದ್ದೀರಿ?

ಡಾ|| ಎಂ. ಶಂಕರನಾಯಕ್ : ಮಾನ್ಯ ಅಧ್ಯಕ್ಷರೇ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಉಪಕರಣಗಳಿಗಾಗಲೀ, ಔಷಧಿಗಳಿಗಾಗಲೀ, ಇಟ್ಟಿರುವ ಖರ್ಚಾಗದೇ ಇಟ್ಟಿರತಕ್ಕಂಥ ಹಣವನ್ನು ಈ ವರ್ಷದಲ್ಲಿ ಖರೀದಿ ಮಾಡಿಕೊಳ್ಳಲು ಮತ್ತು ಉಪಯೋಗಿಸಲು ನಾವು ಕ್ಯಾರಿಓವರ್ ಮಾಡುತ್ತೇವೆ ಅದನ್ನು ಈ ವರ್ಷದಲ್ಲಿಯೂ ಖರ್ಚು ಮಾಡಿಕೊಳ್ಳಬಹುದು ಎಂದು ಹೇಳಿದ್ದಾರೆ. ಆದ್ದರಿಂದ ಹಣವು ಲ್ಯಾಪ್ಸ್ ಆಗತಕ್ಕಂಥ ಪ್ರಮೇಯವು ಬರುವುದಿಲ್ಲ. ಹುದ್ದೆಗಳು ಭರ್ತಿಯಾದ ಮೇಲೆ ಹಣವು ತಾನಾಗಿಯೇ ಖರ್ಚಾಗುತ್ತದೆ.

ಚು.ಗು.ಪ್ರ : 154 (930) (ತಡೆ ಹಿಡಿಯಲಾದ ಪ್ರಶ್ನೆ)

ರಾಷ್ಟ್ರೀಯ ನೀರು ಪೂರೈಕೆ ಯೋಜನೆ.

154- ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿನಲ್ಲಿ ರಾಜ್ಯದಲ್ಲಿ ಜಿಲ್ಲಾವಾರು ನಿಗದಿಪಡಿಸಿದ ರಾಷ್ಟ್ರೀಯ ನೀರು ಪೂರೈಕೆ ಯೋಜನೆಯ ಆರ್ಥಿಕ ಹಾಗೂ ಭೌತಿಕ ಗುರಿ ಎಷ್ಟು, ಸಾಧಿಸಿದ ಪ್ರಗತಿ ವಿವರಗಳನ್ನು ಒದಗಿಸುವುದು; (ಧಾರವಾಡ ಜಿಲ್ಲೆಯ ತಾಲ್ಲೂಕುವಾರು ನಿಗದಿಪಡಿಸಿದ ಗುರಿ, ಸಾಧಿಸಿದ ಪ್ರಗತಿಯ ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು)?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ ಧಾರವಾಡ ಜಿಲ್ಲೆಯ ತಾಲ್ಲೂಕುವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಅನುಬಂಧ -1

ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಕಾರ್ಯಕ್ರಮ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ವಾರ್ಷಿಕಗುರಿ97-98		ವಾರ್ಷಿಕ ಸಾಧನೆ 97-98	
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1.	ಬೆಂಗಳೂರು (ಗ್ರಾ)	75.00	10	84.35	18
2.	ಬೆಂಗಳೂರು (ನಗರ)	58.28	9	107.87	11
3.	ಕೋಲಾರ	120.00	18	101.92	13
4.	ತುಮಕೂರು	168.36	23	124.13	24
5.	ಚಿತ್ರದುರ್ಗ	72.75	10	61.57	15
6.	ಶಿವಮೊಗ್ಗ	100.00	18	110.77	16
7.	ಚಿಕ್ಕಮಗಳೂರು	100.00	24	78.59	14
8.	ಮೈಸೂರು	301.85	69	325.28	68
9.	ಮಂಡ್ಯ	140.00	34	133.30	7
10.	ಹಾಸನ	100.46	55	68.02	17
11.	ದಕ್ಷಿಣ ಕನ್ನಡ	274.03	23	279.74	27
12.	ಕೊಡಗು	35.78	9	37.51	2
13.	ಬೆಳಗಾಂ	264.94	36	272.91	43
14.	ಧಾರವಾಡ	240.00	39	317.54	62
15.	ಉತ್ತರ ಕನ್ನಡ	130.00	16	98.78	13
16.	ಬಿಜಾಪುರ	90.10	12	94.66	14
17.	ಗುಲ್ಬರ್ಗಾ	114.00	16	103.73	33
18.	ಬೀದರ್	107.50	7	83.74	9
19.	ರಾಯಚೂರು	150.00	22	175.68	19
20.	ಬಳ್ಳಾರಿ	70.64	8	67.17	11
	ಒಟ್ಟು ಮೊತ್ತ	**2713.69**	**458**	**2727.25**	**436**

ಅನುಬಂಧ - 2

ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರು ಸರಬರಾಜು ಕಾರ್ಯಕ್ರಮ

ಜಿಲ್ಲೆ : ಧಾರವಾಡ (ರೂ. ಲಕ್ಷಗಳಲ್ಲಿ)

ಅವಿಭಾಜಿತ ಧಾರವಾಡ ಜಿಲ್ಲೆಯ ತಾಲ್ಲೂಕುಗಳು	ವಾರ್ಷಿಕ ಗುರಿ 97-98		ವಾರ್ಷಿಕ ಸಾಧನೆ 97-98	
	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
I. ಧಾರವಾಡ ಜಿಲ್ಲೆ ಪಂಚಾಯತ್ ಇಂಜಿನಿಯರಿಂಗ್ ವಿಭಾಗ :				
1. ಧಾರವಾಡ	19.20	1		
2. ಹುಬ್ಬಳ್ಳಿ	12.00	4		
3. ಕಲಘಟಗಿ	12.00	2	164.18	31
4. ಕುಂದಗೋಳ	12.00	1		
5. ಶಿಗ್ಗಾಂವ್	14.40	1		
	69.60	**9**	**164.18**	**31**
II. ಹಾವೇರಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ :				
1. ಹಾವೇರಿ	19.20	5		
2. ಹಿರೇಕೆರೂರು	19.20	3		
3. ರಾಣೆ ಬೆನ್ನೂರು	21.60	4	99.27	20
4. ಬ್ಯಾಡಗಿ	9.60	2		
5. ಹಾನಗಲ್	19.20	2		
6. ಸವಣೂರ್	9.60	2		
	98.40	18	99.27	20
III.ಗದಗ್ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗ :				
1. ಗದಗ್	14.40	3		
2. ಮುಂಡರಗಿ	9.60	2		
3. ಶಿರಹಟ್ಟಿ	12.00	3	54.09	11
4. ರೋಣ	16.80	3		
5. ನರಗುಂದ	7.20	-		
6. ನವಲ್‌ಗುಂದ್	12.00	1		
	72.00	12	54.09	11
ಒಟ್ಟು	**240.00**	**39**	**317.54**	**62**

ಶ್ರೀ ಯು.ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಂಥ ಉತ್ತರದಲ್ಲಿ ಕಳೆದ 1997-98ರಲ್ಲಿ ಸುಮಾರು 27ಕೋಟಿ ರೂ.ಗಳ ವೆಚ್ಚದಲ್ಲಿ 436 ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳನ್ನು ಮುಗಿಸಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಈ ವಾರ್ಷಿಕ ಗುರಿಯಲ್ಲಿ ನಾವು ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಹೋಲಿಸಿ ನೋಡಿದಾಗ ಅದು ತಾಳೆಯಾಗುತ್ತಾ ಇಲ್ಲ. ಉದಾಹರಣೆಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ 58 ಲಕ್ಷ ರೂ.ಗಳನ್ನು ಖರ್ಚು ಮಾಡಬೇಕಾಗಿತ್ತು, ಆದರೆ ಒಂದು ಕೋಟಿ 7 ಲಕ್ಷ ರೂ. ಗಳನ್ನು ಅಲ್ಲಿ ಖರ್ಚು ಮಾಡಿದ್ದಾರೆ. ಹಾಸನ ಜಿಲ್ಲಾ ಪಂಚಾಯತ್‌ನಲ್ಲಿ ಒಂದು ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಗಿತ್ತು ಆದರೆ ಅಲ್ಲಿ ಕೇವಲ 68 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ. ಈ ರೀತಿಯಲ್ಲಿ ಕೆಲವೊಂದು ಜಿಲ್ಲಾ ಪಂಚಾಯತ್‌ಗಳು ತಮ್ಮ ಆರ್ಥಿಕ ಗುರಿಯನ್ನು ಮೀರಿ ಖರ್ಚು ಮಾಡಿದ್ದಾರೆ. ಹಾಗೆಯೇ ಕೆಲವರಿಗೆ ಆರ್ಥಿಕ ಗುರಿಯನ್ನು ಮುಟ್ಟಲು ಆಗಲಿಲ್ಲ. ಇದಕ್ಕೆ ಯಾವರೀತಿಯಾಗಿ ತಾವು ಹೊಂದಾಣಿಕೆಯನ್ನು ಮಾಡುತ್ತಾ ಇದ್ದೀರಿ? ಉದಾಹರಣೆಗೆ ನಮ್ಮ ಧಾರವಾಡ ಜಿಲ್ಲಾ ಪಂಚಾಯತ್‌ನ್ನು ತೆಗೆದುಕೊಂಡರೆ, ಹಾವೇರಿ ಜಿಲ್ಲಾ ಪಂಚಾಯತ್ ವಿಭಾಗದಲ್ಲಿ ಸುಮಾರು 98 ಲಕ್ಷಗಳಲ್ಲಿ 99 ಲಕ್ಷ ಖರ್ಚು ಮಾಡಿದ್ದಾರೆ. ಧಾರವಾಡ ಇಂಜಿನಿಯರಿಂಗ್ ಉಪವಿಭಾಗದಲ್ಲಿ 69 ಗುರಿ ಇದ್ದರೆ ಒಂದು ಕೋಟಿ 64 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ. ಆದ್ದರಿಂದ ಅವರು ಯಾವರೀತಿಯಲ್ಲಿ ಹಣವನ್ನು ಹೊಂದಾಣಿಕೆ ಮಾಡಿಕೊಳ್ಳುತ್ತಾರೆ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ರೀತಿಯಾಗಿ ಅಲ್ಲಿಯ ಪರಿಸ್ಥಿತಿಗೆ ಅನುಗುಣವಾದಂಥ ರೀತಿಯಲ್ಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಟ್ಟಿರುವುದರಿಂದ ಹಣವನ್ನು ಖರ್ಚು ಮಾಡಿರತಕ್ಕಂಥಾದ್ದು ಇದೆ. ಉದಾಹರಣೆಗೆ ಹೇಳುವುದಾದರೆ ಅವಿಭಾಜ್ಯ ಧಾರವಾಡ ಜಿಲ್ಲೆಯಲ್ಲಿ 1997-98ನೇ ಸಾಲಿನಲ್ಲಿ 2727.25 ಲಕ್ಷ ರೂ.ಗಳ ಗುರಿ ಇದ್ದರೆ, 458 ಯೋಜನೆಗಳ ಪೈಕಿ 436 ಯೋಜನೆಗಳು ಪೂರ್ಣಗೊಂಡಿವೆ. ಅದಕ್ಕಾಗಿ 317.50 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ.39 ಯೋಜನೆಗಳು ಗುರಿ ಇರತಕ್ಕಂಥಾದ್ದರಲ್ಲಿ62 ಯೋಜನೆಗಳನ್ನು ಕೈಗೊಂಡಿದ್ದಾರೆ. ಕೆಲವು ಸಲ ಹೆಚ್ಚು ಅನುದಾನವನ್ನು ಪಡೆದಿರತಕ್ಕಂಥ ರೀತಿಯಲ್ಲಿ ಆಗಿರುತ್ತದೆ. ತಾವುಗಳು ಹೇಳಿದಂತೆ ಧಾರವಾಡದಲ್ಲಿ ಹೆಚ್ಚು ಖರ್ಚು ಆಗಿ, ಹಾವೇರಿ ಮತ್ತು ಗದಗ ಇಂಜಿನಿಯರಿಂಗ್ ಉಪವಿಭಾಗದಲ್ಲಿ ಕಡಿಮೆ ಖರ್ಚಾಗಿದೆ ಎಂದು ಹೇಳಿದಾಗ, ಗದಗ್ ಮತ್ತು ಹಾವೇರಿ ಜಿಲ್ಲಾಪಂಚಾಯತ್ ವಿಭಾಗದವರು ಹೊಸದಾಗಿ ಕೊಳವೆಬಾವಿಗಳನ್ನು ತೆಗೆದಿರುವಂತಹ ವಿಚಾರದಲ್ಲಿ ಮಾತ್ರ ಅಂಕಿಅಂಶಗಳನ್ನು ಒದಗಿಸಿಕೊಟ್ಟಿದ್ದಾರೆ. ಆದರೆ ಧಾರವಾಡ ಜಿಲ್ಲೆಯಲ್ಲಿರತಕ್ಕಂಥಾದ್ದು, ಕೊಳವೆಬಾವಿಯನ್ನು ಹೊಸದಾಗಿ ತೆಗೆಯುವುದರ ಜೊತೆಗೆ ಪುನ:ಶ್ಚೇತನ ಗೊಳಿಸತಕ್ಕಂಥಾದ್ದು, ಹೊಸದಾಗಿ ಪೈಪ್‌ಲೈನ್‌ಗಳನ್ನು ಹಾಕಿರತಕ್ಕಂಥಾದ್ದು ಎಲ್ಲಾ ವೆಚ್ಚಗಳನ್ನು ಸೇರಿಸಿಕೊಟ್ಟಿರುವುದರಿಂದ ಮೇಲ್ನೋಟಕ್ಕೆ ಅದು 69.60ಲಕ್ಷ ಇರತಕ್ಕಂಥಾದ್ದು 164.18 ಲಕ್ಷ ಆಗಿವೆ ಎಂದು ಭಾವನೆ ಆಗುತ್ತದೆ. ಆದರೆ ಅದೇ ರೀತಿಯಾದಂಥ ಅಂಕಿಅಂಶಗಳನ್ನು ಹಾವೇರಿ ಮತ್ತು ಗದಗ ಜಿಲ್ಲೆಯವರು ಕೊಟ್ಟಿಲ್ಲ. ಆ ಕಾರಣದಿಂದಾಗಿ ಈ ತಾರತಮ್ಯದಂತೆ ಕಂಡು ಬರುತ್ತಿರಬಹುದು. ನಿಜವಾಗಿಯೂ ಅದು ತಾರತಮ್ಯ ಅಲ್ಲ. ತಮಗೆ ಗೊತ್ತಿರುವಂತೆ 317.54 ಲಕ್ಷ ರೂ.ಗಳು ಅಂದರೆ ಹತ್ತಿರ ಹತ್ತಿರ 60-70 ಲಕ್ಷ ರೂ.ಗಳನ್ನು ಹೆಚ್ಚಿಗೆ ಖರ್ಚು ಮಾಡಿದ್ದಾರೆ. ಆದ್ದರಿಂದ ಖರ್ಚು ಮಾಡಿದ್ದರ ಬಗ್ಗೆ ಸರಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸಬೇಕು.

ಶ್ರೀ ಯು.ಬಿ. ಬಣಕಾರ್ : ನೀವು ವಾರ್ಷಿಕ ಗುರಿಯನ್ನು ಪ್ರತಿವರ್ಷವೂ ನಿಗದಿ ಮಾಡುತ್ತೀರಿ. ಆದ್ದರಿಂದ ವಾರ್ಷಿಕ ಗುರಿಯನ್ನು ಆಯಾ ವರ್ಷವೇ ಸಾಧಿಸಬೇಕೆಂದು ತಾವು ಮಾಡಬೇಕಾಗುತ್ತದೆ. ಏಕೆಂದರೆ ಕೆಲವೊಂದು ತಾಲ್ಲೂಕುಗಳಲ್ಲಿ ಐದಾರುವರ್ಷಗಳಿಂದ ಆ ಯೋಜನೆಯು ಬರುತ್ತಾ ಇರುತ್ತದೆ. ಹಾಗೆಯೇ ನೀರು ಪೂರೈಕೆ ಯೋಜನೆಗಳಿಗೆ ನಿರ್ವಹಣಾ ವೆಚ್ಚವನ್ನು ಮಾಡುತ್ತಿದ್ದೀರಿ. ಅದರ ಬಗ್ಗೆ ಹೇಳಬೇಕೆಂದರೆ ನಮ್ಮ ಹಾವೇರಿ ಜಿಲ್ಲೆಗೆ 41ಲಕ್ಷ ರೂ.ಗಳನ್ನು ಕೊಟ್ಟಿದ್ದರೆ ಅಲ್ಲಿ ಖರ್ಚು ಮಾಡಿರುವುದು 63ಲಕ್ಷಗಳು. ಆದ್ದರಿಂದ ಯೋಜನೆಗಳು ಜಾಸ್ತಿಯಾಗುತ್ತಿರುವುದರಿಂದ ನಿರ್ವಹಣಾ ವೆಚ್ಚವನ್ನು ಕೂಡ ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಹೀಗೆ ಹೆಚ್ಚುವರಿಯಾದಂಥ ಸಂದರ್ಭದಲ್ಲಿ ಗುರಿಯೆನ್ನು ಏನು ಇಟ್ಟುಕೊಂಡಿರುತ್ತೇನೆ. ಆದರೆ ವಾತಾವರಣದಲ್ಲಿ ಆದಂಥ ಬದಲಾವಣೆಗಳು ಋತುಮಾನಗಳಲ್ಲಿ ಆದಂಥ ವ್ಯತ್ಯಾಸಗಳು, ಇವುಗಳನ್ನು ಅನುಸರಿಸಿ ಅನೇಕ ಸಂದರ್ಭಗಳಲ್ಲಿ ಕುಡಿಯುವ ನೀರಿಗೆ ಹೆಚ್ಚು ಆದ್ಯತೆಯನ್ನು ಕೊಟ್ಟು ಹೆಚ್ಚು ಖರ್ಚು ಮಾಡತಕ್ಕಂಥ ಸಂದರ್ಭಗಳು ಕೂಡ ಇರುತ್ತವೆ. ತಾವುಗಳು ಹೇಳಿದಂತೆ ನಿರ್ವಹಣಾ ವೆಚ್ಚವನ್ನು ಅವರೇ ನೋಡಿಕೊಳ್ಳಬೇಕಾಗುತ್ತದೆ. ಅದನ್ನು ಕ್ರಿಯಾಯೋಜನೆಯಲ್ಲಿ ಮಾಡಿಕೊಳ್ಳಬೇಕು. ಒಂದು ವೇಳೆ ನಿರ್ವಹಣಾ ವೆಚ್ಚದಲ್ಲಿ ಹಣವು ಕಡಿಮೆ ಬಿದ್ದಾಗಲೂ ಕೂಡ ರಾಜ್ಯ ಸರಕಾರವು ಅವರಿಗೆ ಹೆಚ್ಚುವರಿ ಹಣವನ್ನು ಒದಗಿಸಿಕೊಡತಕ್ಕಂಥ ಉದಾಹರಣೆ ಕೂಡ ಇದೆ. ತಾವು ಹೇಳಿದಂತೆ ಹೆಚ್ಚು ಕಾಮಗಾರಿಗಳನ್ನು ಅನುದಾನ ಕೊಡದೇ ಕೈಗೊಳ್ಳಬಾರದು ಎಂದು ಹೇಳಿ, ಸುತ್ತೋಲೆಯನ್ನು ಕಳುಹಿಸಿಕೊಟ್ಟು ಸುಮಾರು ಎರಡು ವರ್ಷಗಳು ಆದುವು. ಅದರಲ್ಲಿ ಕಿರುನೀರು ಯೋಜನೆಗೆ ಶೇಕಡ 40 ಭಾಗವನ್ನು ಅನುದಾನದಲ್ಲಿ ಕೊಡದಿದ್ದರೆ ಕಾರ್ಯಕ್ರಮವನ್ನು ಹಾಕಿಕೊಳ್ಳಬಾರದು, ಒಂದು ವರ್ಷದಲ್ಲಿ ಮುಕ್ತಾಯಗೊಳಿಸಬೇಕೆಂದು ಹೇಳಿದ್ದೇವೆ. ಹಾಗೆಯೇ ಕುಡಿಯುವ ನೀರಿನ ಯೋಜನೆಯನ್ನು ಪೈಪ್‌ಲೈನ್‌ಗಳ ಮೂಲಕ ಮಾಡತಕ್ಕಂಥಾದ್ದು, ನಳದ ಯೋಜನೆಗಳು ಇದ್ದರೆ, ಅದನ್ನು ಎರಡು ವರ್ಷಗಳಲ್ಲಿ ಮುಗಿಸಿಯೇ ತೀರಬೇಕು. ಶೇಕಡಾ 40 ಭಾಗವನ್ನು ಅನುದಾನದಲ್ಲಿ ಒದಗಿಸಿಕೊಡಲೇಬೇಕೆಂಬ ಮಾತನ್ನು ಕೂಡ ಹೇಳಿದ್ದೇವೆ. ಆದರೆ ಕೆಲವು ಸಲ ಶಾಸಕರು ಹೆಚ್ಚು ಪ್ರಭಾವ ಬೀರಿದಾಗ, ಸಾರ್ವಜನಿಕರು ಹೆಚ್ಚು ಒತ್ತಡವನ್ನು ತಂದಾಗ, ಕೆಲವು ಇಂಥ ವ್ಯತ್ಯಾಸಗಳು ಆಗಿ ಅನೇಕ ಯೋಜನೆಗಳು ಮುಂದುವರಿದಂಥ ಕಾಮಗಾರಿಗಳು ಕೂಡ ಆಗಿದ್ದಾವೆ. ಆ ಅನಿಷ್ಠ ಪದ್ಧತಿಯನ್ನು ಕೈಬಿಡಬೇಕೆಂಬ ಸುತ್ತೋಲೆಯನ್ನು ಕೂಡ ನಾವು ಜಾರಿಗೆ ಕೊಟ್ಟಿದ್ದೇವೆ.

ಅಧ್ಯಕ್ಷರು : ಶ್ರೀ ಬಿ. ರಾಮು, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಬಸವನಗೌಡ ಪಾಟೀಲ್, ಇಲ್ಲಿಗೆ ಪ್ರಶ್ನೋತ್ತರ ವೇಳೆಯು ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ದಿನದ ಲಿಖಿತ ಮೂಲಕ ಉತ್ತರಿಸುವ 24ನೇ ಪಟ್ಟಿಯಲ್ಲಿನ ಒಟ್ಟು 106 ಪ್ರಶ್ನೆಗಳ ಪೈಕಿ 60 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದಿಡುತ್ತಿದ್ದೇನೆ. ದಿನಾಂಕ 30ನೇ ಏಪ್ರಿಲ್ 1998ರಂದು ಪ್ರಶ್ನೋತ್ತರ ವೇಳೆ ನಡೆಯದ ಕಾರಣ 21ನೇ ಪಟ್ಟಿಯಲ್ಲಿನ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ 9 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ